

ಭೂಮಿಯಲ್ಲಿ ಹುಟ್ಟಿದ್ದು ಸಾರ್ಥಕ ಆಯಿತೆಂಬ ವಿನೀತ ಭಾವ. ಮುಖಕ್ಕೆ ರಾಚುವ ಹನಿಗಳ ಸಿಂಚನಗಳು ಒಂದು ವಿನಮ್ರ ಚಳಿಯನ್ನು ಹುಟ್ಟಿಸಿದವು.

'ಅಂಬೋಲಿ ಅಭಿ ಕಿತೆನೆ ದೂರ್ ಹೈ ಬಾಯಿ' ಎಂದು ವಿಚಾರಿಸಿದೆ. 'ಪಾವ್ ಗಂಟೇಕ ರಾಸ್ತಾ ಹೈ' ಎಂದ. 'ಹಾಲಿಗೆ ನೀರಾಕದಂತೆ ಗಟ್ಟಿ ಕೆ.ಟಿ. ಮಾಡು. ದುಡ್ಡು ಜಾಸ್ತೀನೆ ತಗೋ. ಹಾಲಿಗೆ ದಯಮಾಡಿ ನೀರು ಬೆರೆಸಬೇಡ ನಿನಗೆ ಕೈ ಮುಗೀತಿನಿ' ಎಂದೆ. ನಿದ್ದೆ ಮಂಪರಿನಲ್ಲಿದ್ದ ಅವನು ನಾನು ಹೇಳಿದ್ದಕ್ಕೆಲ್ಲಾ ತಲೆಯಾಡಿಸುತ್ತಿದ್ದ. ಆದರೆ ಯಾವ ಮಾತನ್ನೂ ಪಾಲಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಮೊದಲೇ ನೀರು ಸುರಿದಿಟ್ಟ ಹಾಲಿಗೆ ಟೀ ಪುಡಿ ಎಸೆದು ಮಜವಾಗಿ ನಿಂತ. ನೋಡಿದರೆ ಅದೂ ಡೂಪ್ಲಿಕೇಟ್ ಟೀ ಪುಡಿ ಎಂದು ಚೆನ್ನಾಗಿಯೇ ಗೊತ್ತಾಗುತ್ತಿತ್ತು. ಹಾಲಿಗೆ ಬೀಳುತ್ತಲೇ ಅದು ತನ್ನ ಪ್ರತಾಪ ತೋರಿಸಿತು. ಕುದಿಯುವ ಮೊದಲೇ ಹೀಗೆ ಬಣ್ಣ ಬಿಡುವ ನೀಚ ಟೀ ಪುಡಿಗಳ ಹಾವಳಿ ರಸ್ತೆ ಪ್ರಯಾಣದಲ್ಲಿ ಸರ್ವೆಸಾಮಾನ್ಯವಾಗಿರುತ್ತವೆ. ನಮ್ಮಂಥ ನಿಶಾಚರಿಗಳಿಗೆ ಟೋಪಿ ಹಾಕಲೆಂದೇ ಈ ಟೀ ಪುಡಿ ತಯಾರಕರು ಹೊಂಚು ಹಾಕಿರುತ್ತಾರೆ.

ಸುಮ್ಮನಿರದ ನಾನು ಆ ಹುಡುಗನ ಮಾತಿಗೆಳೆದೆ. ಟೀ ಪುಡಿ ಸಾಚಾತನ ಪ್ರಶ್ನಿಸಿದೆ. ಅವನು ಇದರಷ್ಟು ಒರಿಜಿನಲ್ ಟೀ ಪುಡಿ ಇಡೀ ಪ್ರಪಂಚದಲ್ಲೇ ಇಲ್ಲ. ಅಷ್ಟು ಫೇಮಸ್ ಟೀ ಪುಡಿ ನಾವು ತರಿಸುವುದು ಎಂದು ವಾದಿಸಿದ. ಇರಲಿ ಬಿಡು ನಿನ್ನ ವಿಷಯ ಹೇಳು ಎಂದೆ. ಹಗಲಲ್ಲಿ ಕಾಲೇಜು ಕಲಿಯೋಕೆ ಹೋಗ್ತೀನಿ. ರಾತ್ರಿ ಡ್ಯೂಟಿ ಇಲ್ಲೇ. ಉಳಿದಂತೆ ಅಪ್ಪ ಹೋಟೆಲ್ಲು ನೋಡ್ಕೋತಾರೆ. ನಿಮಗೆ ಬಿಸ್ಕತ್ತು, ಬನ್ನು ಏನಾದ್ರೂ ಬೇಕಾ? ಎಂದು ನಗುತ್ತಲೇ ವ್ಯಾಪಾರ ಮರೆಯದೆ ಉತ್ತರಿಸಿದ. ನಿಮ್ಮಂತಹ ಪಟಗಾರರು ಇಲ್ಲಿಗೆ ಬರ್ತಾರೆ. ಅವರೇ ನಮ್ಮ ಒರಿಜಿನಲ್ ಗ್ರಾಹಕರು. ಶನಿವಾರದ ರಾತ್ರಿ ಯಾಪಾರ ಬಂಪರ್ ಲಾಟ್ರಿ ಸರ್. ಹಿಂಗೇ ಮಳೆ ಸುರೀತಿದ್ರೆ ಮಂದಿ ಜಮಾಯಿಸುತ್ತಾರೆ. ನೀವು ಕೂಡ ಮ್ಯಾಕ್ರೋ ಫೋಟೋಗ್ರಫಿಗೆ ಬಂದವರು ತಾನೇ? ಎಂದು ನಕ್ಕ.

ಈ ಮೊದಲು ಅಂಬೋಲಿಗೆ ಶಶಿ ಸಿಂಗ್ ತಮ್ಮ